ಸಿ.ಸಿ ನಂಃ 534/2022

ಡಿ ಡಬ್ಲುಃ 03.

ಸಾಕ್ಷಿಯನ್ನು ದಿನಾಂಕಃ **05.03.2026.** ರಂದು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.

**ಪಾಟೀ ಸವಾಲುಃ ಶ್ರೀ ಆರ್.ಎಸ್.ಹೆಚ್ ಪಿರ್ಯಾದಿ ಪರ ವಕೀಲರಿಂದಃ**

ಈ ಪ್ರಕರಣವನ್ನು ಯಾರು, ಯಾರ ವಿರುದ್ಧ ದಾಖಲು ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಈ ಪ್ರಕರಣದಲ್ಲಿ ಆರೋಪಿ ಯಾರೆಂದು ನನಗೆ ಗೊತ್ತಿಲ್ಲ. ನಿಡಿ.8 ರ ಬಗ್ಗೆ ವಿಚಾರಿಸಲು 2022 ರಿಂದ ಇಲ್ಲಿಯವರೆಗೆ ನನ್ನ ಬಳಿ ಯಾರು ಬಂದಿರುವುದಿಲ್ಲ. ನಿಡಿ.8 ರ ಬಗ್ಗೆ ನಮ್ಮ ಸಂಸ್ಥೆಯ ಪದಾಧಿಕಾರಿಗಳು ಮತ್ತು ಸಂಸ್ಥೆಯ ಸಿಬ್ಬಂದಿಗಳನ್ನು ಹೊರತುಪಡಿಸಿ, ನಾನು ಬೇರೆ ಯಾರೊಂದಿಗೂ ಚರ್ಚಿಸಿದ್ದು ಇರುವುದಿಲ್ಲ. ಪಂಚನಾಮೆ ಮಾಡುವ ಪೂರ್ವದಲ್ಲಿ ಆಡಳಿತ ಸಮೀತಿ ಠರಾವನ್ನೇನು ಹೊರಡಿಸಿದ್ದು ಇರುವುದಿಲ್ಲ. ಸಾಮಾನ್ಯವಾಗಿ ಸಹಕಾರಿ ಸಂಘಕ್ಕೆ ಯಾರಾದರು ಅರ್ಜಿ ಸಲ್ಲಿಸಿದ್ದಲ್ಲಿ ನಾವು ಅದನ್ನು ಆಡಳಿತ ಸಮೀತಿಯ ಮುಂದಿಟ್ಟು ಅದಕ್ಕೆ ಸಂಬಂಧಿಸಿದಂತೆ ಠರಾವನ್ನು ಹೊರಡಿಸಿ ನಂತರ ನಿರ್ಣಯವನ್ನು ತೆಗೆದುಕೊಳ್ಳುತ್ತೇವೆ ಎಂದರೆ ಸರಿ. ಸಾಕ್ಷಿ ಮುಂದುವರೆದು, ಎಲ್ಲಾ ಅರ್ಜಿಗಳನ್ನು ಆಡಳಿತ ಸಮೀತಿ ಮುಂದೆ ಇಡುವುದಿಲ್ಲ, ಕೆಲವೊಂದು ಅರ್ಜಿಯನ್ನು ಇಡುತ್ತೇವೆ ಎಂದು ನುಡಿಯುತ್ತಾರೆ.

ನಾನು ಎಲ್.ಎಸ್.ಎಂ.ಪಿ ಸೊಸೈಟಿಯಲ್ಲಿ ಸುಮಾರು 35 ವರ್ಷಗಳಿಂದ ಕಾರ್ಯನಿರ್ವಹಿಸುತ್ತಿದ್ದೇನೆ. ನಾನು ಯಾವ ಯಾವ ವಿಭಾಗಳಲ್ಲಿ ಕೆಲಸ ಮಾಡಿದ್ದೇನೋ ಆಯಾ ವಿಭಾಗಗಳಿಗೆ ಸಂಬಂಧಿಸಿದ ದಾಖಲಾತಿಗಳ ಬಗ್ಗೆ ಪರಿಣಿತಿಯನ್ನು ಹೊಂದಿರುತ್ತೇನೆ. ಯಾವುದೇ ಅರ್ಜಿಗಳು ಸ್ವೀಕೃತವಾದಲ್ಲಿ ಅವು ನನ್ನ ಬಳಿ ಬಂದೆ, ಮುಖ್ಯ ಕಾರ್ಯನಿರ್ವಾಹಕರಿಗೆ ಹೋಗುತ್ತವೆ ಎಂದರೆ ಸರಿಯಲ್ಲ. ನನ್ನ ಅನುಭವದಲ್ಲಿ ಹೇಳುವುದಾದರೇ ಅರ್ಜಿಗಳು ಮುಖ್ಯ ಕಾರ್ಯನಿರ್ವಾಹಕರಿಂದ ಆಡಳಿತ ಸಮೀತಿಗೆ ಹೋಗುತ್ತವೆ. ಯಾವ ಅರ್ಜಿಗಳನ್ನು ಆಡಳಿತ ಸಮೀತಿಯ ಸಮಕ್ಷಮ ಇಡಬೇಕು ಮತ್ತು ಯಾವ ಯಾವ ಅರ್ಜಿಗಳಿಗೆ ಸಂಬಂಧಿಸಿದಂತೆ ನಾನು ನಿರ್ಣಯವನ್ನು ತೆಗೆದುಕೊಳ್ಳಬಹುದು ಎನ್ನುವ ಬಗ್ಗೆ ನನಗೆ ಮಾಹಿತಿ ಇದೆ. ನಿಡಿ.8 ಕ್ಕೆ ಸಂಬಂಧಿಸಿದಂತೆ ಎ.ಆರ್ ಕಚೇರಿಯಿಂದ ಯಾವುದಾದರೂ ಅಧೀಕೃತ ಆದೇಶವಿತ್ತೆ ಎಂದರೆ, ಸಾಕ್ಷಿಯು ಆಡಳಿತ ಕಮೀಟಿಯವರು ಏಕಾ ಏಕಿಯಾಗಿ ನಿರ್ಣಯ ಕೈಗೊಂಡಿದ್ದು, ಆ ಪ್ರಕಾರ ನಾನು ನಡೆದುಕೊಂಡಿರುತ್ತೇನೆ ಎಂದು ನುಡಿಯುತ್ತಾರೆ. ಪಂಚನಾಮೆ ಮಾಡಿದ ನಂತರ, ನಾವು ಠರಾವನ್ನು ಪಡೆದುಕೊಂಡೇವು. ಯಾವ ದಿನಾಂಕದಂದು ನಾವು ಠರಾವನ್ನು ಪಡೆದುಕೊಂಡೇವು ಎಂದರೆ, ದಾಖಲಾತಿ ನೋಡಿ ಹೇಳಬೇಕಾಗುತ್ತದೆ, ನಾನು ದಾಖಲಾತಿಯನ್ನು ತೆಗೆದುಕೊಂಡು ಬಂದಿಲ್ಲ ಎಂದು ನುಡಿಯುತ್ತಾರೆ. ಪಂಚನಾಮೆ ಮಾಡಿದ ಎಷ್ಟು ದಿನಗಳ ನಂತರ, ನಾವು ಠರಾವನ್ನು ತೆಗೆದುಕೊಂಡೇವು ಎಂದು ನನಗೆ ನೆನಪಿಲ್ಲ. ಸದರಿ ಠರಾವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಸಲು ತೊಂದರೆ ಇತ್ತೆ ಎಂದರೆ, ನನಗೆ ಗೊತ್ತಿಲ್ಲ. ಸದರಿ ಠರಾವನ್ನು ಹೊರಡಿಸುವ ಕಾಲಕ್ಕೆ ಆಡಳಿತ ಸಮೀತಿ ಸದಸ್ಯರು ಮತ್ತು ಮುಖ್ಯ ಕಾರ್ಯನಿರ್ವಾಹಕರು ಇದ್ದರು.

ನಿಡಿ. 8 ನ್ನು ಜರುಗಿಸುವ ಕಾಲಕ್ಕೆ ಅಧ್ಯಕ್ಷರು, ಆಡಳಿತ ಸಮೀತಿಯ ಸದಸ್ಯರಾದ ಸುನೀಲ್ ವರ್ಣೇಕರ, ಜ್ಞಾನೇಶ ಗುಡಿಹಾಳ, ಮುಖ್ಯ ಕಾರ್ಯನಿರ್ವಾಹಕನಾದ ನಾನು, ಮೃತರ ಹೆಂಡತಿ ಮತ್ತು ಮಕ್ಕಳಾದ ಉಮಾ ಗೌಳಿ ಮತ್ತು ಕುಮಾರಿ ನಿವೇದಿತಾ ಬಾಳಿಗಟ್ಟಿಮಠ ಇವರೆಲ್ಲರೂ ಹಾಜರಿದ್ದೇವು. ಅಲ್ಲಿ ಸಿಕ್ಕ ವಸ್ತುಗಳು ಶಂಭುಲಿಂಗಯ್ಯ ಬಾಳಿಗಟ್ಟಿಮಠ ರವರಿಗೆ ಸೇರಿರುತ್ತವೆ. ಠರಾವು ಪುಸ್ತಕದಲ್ಲಿ ಲಾಕರನಲ್ಲಿ ಸಿಕ್ಕ ವಸ್ತುಗಳ ಬಗ್ಗೆ ಬರೆದಿದ್ದೇವೆ. ಖಾಲಿ ಚೆಕ್ ಗಳು ಎಂದು ಹೇಳಿದ್ದು , ಅವುಗಳು ಯಾರಿಗೆ ಸಂಬಂಧಪಟ್ಟಿದ್ದು ಎಂದು ಠರಾವು ಪುಸ್ತಕದಲ್ಲಿ ನಮೂದಿಸಿದ್ದು ಇರುವುದಿಲ್ಲ. ಸದರಿ ಚೆಕ್ ಗಳ ಮೇಲೆ ಸಹಿ ಇತ್ತೋ ಇಲ್ಲವೋ ಎನ್ನುವ ಬಗ್ಗೆ ಠರಾವು ಪುಸ್ತಕದಲ್ಲಿ ನಮೂದಿಸಿದ್ದು

ಇರುವುದಿಲ್ಲ. ನಿಡಿ.8 ನ್ನು ಎಷ್ಟ ಹೊತ್ತಿನವರೆಗೆ ಜರುಗಿಸಿದೇವು ಎಂದು ನನಗೆ ಲಕ್ಷ್ಯವಿಲ್ಲ. ಸದರಿ ಚೆಕ್ ಗಳು ಕವರಿನಲ್ಲಿದ್ದವು, ನಾನು ಅವುಗಳನ್ನು ಪರಿಶೀಲಿಸಿದ್ದು ಇರುವುದಿಲ್ಲ. ಎಸ್.ಬಿ.ಐ ಬ್ಯಾಂಕಿನ ಸಹಿ ಮಾಡಿದ 3 ಚೆಕ್ ಗಳು ಇದ್ದವು ಅವುಗಳನ್ನು ನಾನು ಕೊಟ್ಟಿರುತ್ತೇನೆ. ಚೆಕ್ ಗಳು ಕವರಿನಲ್ಲಿ ಇದ್ದವು ಎಂದು ಪಂಚನಾಮೆಯಲ್ಲಿ ನಮೂದಿಸಿದ್ದು ಇರುವುದಿಲ್ಲ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಡ್ರಾವರನಲ್ಲಿ ಚೆಕ್‌ಗಳಿದ್ದವು ಎಂದು ನುಡಿದಿರುತ್ತೇನೆ ಎಂದರೆ ಸರಿ. ಸಾಮಾನ್ಯವಾಗಿ ಪಂಚನಾಮೆಯಲ್ಲಿ ಸ್ಥಳದಲ್ಲಿದ್ದ ನಿಜ ಸಂಗತಿಗಳ ಬಗ್ಗೆ ವಿವರವಾಗಿ ಬರೆಯಬೇಕಾಗುತ್ತದೆ ಎಂದರೆ ಸರಿ. ಪಂಚನಾಮೆಯಲ್ಲಿ ವಿವರವಾಗಿ ಮತ್ತು ನಿಖರವಾಗಿ ನಿಜ ಸಂಗತಿಗಳನ್ನು ನಮೂದು ಮಾಡಿಲ್ಲ ಎಂದರೆ, ಸಾಕ್ಷಿಯು ಆ ಸಂದರ್ಭದಲ್ಲಿ ಅವರ ಸಮಕ್ಷಮ ಸಿಕ್ಕ ವಸ್ತುಗಳ ಬಗ್ಗೆ ನಮೂದು ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ಆರೋಪಿಯ ಮುಲಾಜಿಗೆ ಬಿದ್ದು ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**(ಈ ಹಂತದಲ್ಲಿ ಪಿರ್ಯಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯವಕಾಶ ಕೇಳಿದ್ದು ಸಮಯವಕಾಶ ನೀಡಲಾಯಿತು.)**

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತಗೊಳಿಸಲಾಯಿತು.)**

ಓ ಹೆ ಕೇ ಸರಿ ಇದೆ.

**SD/-**

**ಸಿವಿಲ್ ಜಡ್ಜ, ಮುಂಡಗೋಡ.**